ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೦ Volume 160	ಬೆಳಗಾವಿ, ಮಂಗಳವಾರ, ಸೆಪ್ಟೆಂಬರ್ ೧೬, ೨೦೨೫ (ಭಾದ್ರಪದ ಮಾಸ ೨೫, ಶಕ ವರ್ಷ ೧೯೪೭) Belagavi, Tuesday, September 16, 2025 (Bhadrapada Masa 25, ShakaVarsha 1947)	ಸಂಚಿಕೆ–೬೩ Issue-63

ಭಾಗ ೬ಬಿ

ಬೆಳಗಾವಿ ವಿಭಾಗಕ್ಕೆ ಮತ್ತು ಧಾರವಾಡ, ಹಾವೇರಿ, ಗದಗ, ಬೆಳಗಾವಿ, ವಿಜಯಪುರ, ಬಾಗಲಕೋಟೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು ಶಾಸನಬದ್ಧವಲ್ಲದ ಆದರೆ ಜಮೀನು ಸಂಗ್ರಹಣ ಶಾಸನದ ಮೇರೆಗೆ ಹೊರಡಿಸಿದ ಅಧಿಸೂಚನೆಗಳ ಸಹಿತವಾಗಿ ಸರ್ಕಾರದ ಅಧಿಸೂಚನೆಗಳು

ಕರ್ನಾಟಕ ಸರ್ಕಾರ

GOVT OF KARNATAKA

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ ಜಿಲ್ಲೆ, ಧಾರವಾಡ

OFFICE OF THE DEPUTY COMMISSIONER, DHARWAD DISTRICT, DHARAWAD

ಸಂಖ್ಯೆ:ಡಿಯುಡಿಸಿ/ಸೆಟ್ಲಮೆಂಟಶಾಂತಿನಿಕೇತನ/ಕೋ.ಪ್ರಫೋಷಣೆ/ವಹಿ/2025–26/1062 ದಿ:10-09-2025

ಪ್ರಾಥಮಿಕ ಅಧಿಸೂಚನೆ

(ಕರ್ನಾಟಕ ಕೊಳಚೆ ಪ್ರದೇಶಗಳು(ಅಭಿವೃದ್ಧಿ ಮತ್ತು ನಿರ್ಮೂಲನೆ) ಅಧಿನಿಯಮ 1973 ಸೆಕ್ಷನ್–3 ರನ್ವಯ)

ಧಾರವಾಡ ಜಿಲ್ಲೆಯ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸೆಟ್ಲಮೆಂಟ್ ಶಾಂತಿನಿಕೇತನ ಪ್ರದೇಶವು ಹುಬ್ಬಳ್ಳಿ ನಗರ ತಾಲ್ಲೂಕು, ಬಮ್ಮಾಪೂರ ಗ್ರಾಮದ ಸರ್ವೆ ನಂ.198 ರಲ್ಲಿ 4-10 ಎ/ಗುಂ ಮತ್ತು ಸರ್ವೆ ನಂ.199 ರಲ್ಲಿ 2-18 ಎ/ಗುಂ ಒಟ್ಟಾರೆ 6-28 ಎ/ಗುಂ ವಿಸ್ತೀರ್ಣದಿಂದ ಕೂಡಿದ್ದು, ಆರ್.ಟಿ.ಸಿ ಯಂತೆ ಸರಕಾರದ ಮಾಲೀಕತ್ವದಲ್ಲಿರುತ್ತದೆ. ಸದರಿ ಪ್ರದೇಶದಲ್ಲಿ 365 ಕುಟುಂಬಗಳು ವಾಸವಾಗಿದ್ದು, ಅಂದಾಜು 1654 ಜನಸಂಖ್ಯೆಯಿಂದ ಕೂಡಿರುತ್ತದೆ. ಈ ನಿವಾಸಿಗಳು ಸುಮಾರು 45 ವರ್ಷಗಳಿಂದ ಇಲ್ಲಿಯೇ ವಾಸವಾಗಿದ್ದಾರೆ. ಸದರಿ ಪ್ರದೇಶದ ನಿವಾಸಿಗಳು ಹಂಚಿನ ಮನೆ ಮತ್ತು ಚಿಕ್ಕ ಚಿಕ್ಕ ಗುಡಿಸಲುಗಳನ್ನು ನಿರ್ಮಿಸಿಕೊಂಡು ತುಂಬಾ ಹೀನ ಸ್ಥಿತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ ಮತ್ತು ಈ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು ಸಾರ್ವಜನಿಕ ಶೌಚಾಲಯ, ಚರಂಡಿ, ಬೀದಿ ದೀಪ ಇತ್ಯಾದಿ ಸೌಲಭ್ಯಗಳು ಇರುವುದಿಲ್ಲ. ಸದರಿ ಜಾಗವು ಅನಾರೋಗ್ಯಕರ

ವಾತಾವರಣ ಮತ್ತು ಕೊಳಚೆ ಪ್ರದೇಶದ ಗುಣಲಕ್ಷಣಗಳನ್ನು ಹೊಂದಿದ್ದು, ಇಲ್ಲಿನ ನಿವಾಸಿಗಳಿಗೆ ಮಂಡಳಿಯಿಂದ ವಸತಿ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಅವಶ್ಯಕವಿರುತ್ತದೆ. ಆದ್ದರಿಂದ ಸದರಿ ಪ್ರದೇಶವನ್ನು ಮಂಡಳಿ ಕಾಯ್ದೆ ಕಲಂ-3 ರಡಿ ಕೊಳಚೆ ಪ್ರದೇಶವೆಂದು ಘೋಷಣೆ ಮಾಡುವ ಕುರಿತು ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಂಗಳೂರು ರವರು ತಮ್ಮ ಪತ್ರದ ಸಂಖ್ಯೆ ಕಕೋಅಮ/ಕಂದಾಯ/23/2025-26 ದಿನಾಂಕ 16-07-2025 ರಲ್ಲಿ ಸದರಿ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಲು ಶಿಫಾರಸ್ಸಿನೊಂದಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ ರವರು ತಮ್ಮ ಪತ್ರ ಸಂಖ್ಯೆ ನಂ ಎಚ್.ಡಿ.ಎಮ್.ಸಿ/30/01/(ಭೂಮಿ)/2023-24 ದಿನಾಂಕ 30-10-2023 ರಲ್ಲಿ ಸದರಿ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಬಹುದೆಂದು ನಿರಾಕ್ಷೇಪಣಾ ಪತ್ರ ನೀಡಿರುತ್ತಾರೆ. ಮತ್ತು ಸದರಿ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಲು ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಧಾರವಾಡ ವಿಭಾಗ ರವರು ಅನುಬಂಧ –ಎ ದೃಢೀಕರಣ ಪತ್ರ-1 ಹಾಗೂ ಆಯುಕ್ತರು ಹು-ಧಾ ಮಹಾನಗರ ಪಾಲಿಕೆ, ಉಪವಿಭಾಗಾಧಿಕಾರಿಗಳು, ಧಾರವಾಡ ಮತ್ತು ತಹಶೀಲ್ದಾರರರು, ಹುಬ್ಬಳ್ಳಿ ಇವರುಗಳು ಅನುಬಂಧ –ಬಿ, ದೃಢೀಕರಣ ಪತ್ರ-2, ನಿರಾಕ್ಷೇಪಣ ಪತ್ರ ನೀಡಿರುತ್ತಾರೆ.

1)ಆಯುಕ್ತರು, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ, 2) ಉಪ ವಿಭಾಗಾಧಿಕಾರಿಗಳು, ಧಾರವಾಡ 3)ತಹಶೀಲ್ದಾರರು, ಹುಬ್ಬಳ್ಳಿ ನಗರ 4) ಸುಪರಿಟೆಂಡಂಟ್ ಇಂಜಿನೀಯರ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ 5) ಕಾರ್ಯಪಾಲ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಧಾರವಾಡ 6) ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಹುಬ್ಬಳ್ಳಿ ಆಧಿಕಾರಿಗಳ ಜಂಟಿ ಪರಿಶೀಲನಾ ತಂಡ ಸದರಿ ಪ್ರದೇಶಕ್ಕೆ ದಿನಾಂಕ 10-08-2025 ರಂದು ಭೇಟಿ ನೀಡಿ, ಜಂಟಿ ಪರಿಶೀಲನಾ ವರದಿಯನ್ನು ಸಲ್ಲಿಸಿದ್ದು, ಸದರಿ ಅಧಿಕಾರಿಗಳ ಸ್ಥಳ ತಪಾಸಣೆ ವಿಚಾರಣಾ ವರದಿ ಮತ್ತು ದಾಖಲಾತಿಗಳ ಪರಿಶೀಲನೆಯಿಂದ ಸದರಿ ಪ್ರದೇಶವನ್ನು ಮಂಡಳಿಯ ಕಾಯ್ದೆ 1973ರ ಕಲಂ 3ರಡಿ ಕೊಳಚೆ ಪ್ರದೇಶವೆಂದು ಘೋಷಿಸುವುದು ಸೂಕ್ತವೆಂದು ಭಾವಿಸಲಾಗಿದೆ.

ಆದ್ದರಿಂದ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಧಾರವಾಡ ವಿಭಾಗ ರವರು ಸಲ್ಲಿಸಿರುವ ಅನುಬಂಧ –ಎ ದೃಢೀಕರಣ ಪತ್ರ-1 ಹಾಗೂ ಆಯುಕ್ತರು ಹು-ಧಾ ಮಹಾನಗರ ಪಾಲಿಕೆ, ಉಪವಿಭಾಗಾಧಿಕಾರಿಗಳು, ಧಾರವಾಡ ಮತ್ತು ತಹಶೀಲ್ದಾರರರು, ಹುಬ್ಬಳ್ಳಿ ಇವರುಗಳು ಸಲ್ಲಿಸಿರುವ ಅನುಬಂಧ –ಬಿ, ದೃಢೀಕರಣ ಪತ್ರ-2, ನಿರಾಕ್ಷೇಪಣ ಪತ್ರ ಮತ್ತು ಜಂಟಿ ಸ್ಥಳ ಪರೀಶೀಲನೆಯ ವರದಿಯನ್ನು ಆಧರಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ:ವಇ 73 ಎಸ್‌ಬಿಎಂ 2001 ದಿನಾಂಕ:26/06/2002 ರಲ್ಲಿ ಕರ್ನಾಟಕ ಕೊಳಚೆ ಪ್ರದೇಶ (ಅಭಿವೃದ್ಧಿ

ಮತ್ತು ನಿರ್ಮೂಲನಾ) ಕಾಯ್ದೆ 1973 ರ ಕಲಂ 3 ರನ್ವಯ ಕೊಳಚೆ ಪ್ರದೇಶಗಳನ್ನು "ಕೊಳಚೆ ಪ್ರದೇಶ"ವೆಂದು ಘೋಷಿಸಲು ಜಿಲ್ಲಾಧಿಕಾರಿಗಳಿಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಾಣಿಸಿದ ಅನುಸೂಚಿಯಲ್ಲಿ ವಿವರಿಸಿದ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸಲು ಉದ್ದೇಶಿಸಿ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಅನುಸೂಚಿ

ಕೊಳಚೆ ಪ್ರದೇಶಗಳ ಹೆಸರು	ಮಾಲೀಕರ ಹೆಸರು	ಗ್ರಾಮ	ರಿ.ಸ.ನಂ	ಅಂದಾಜು ವಿಸ್ತೀರ್ಣ ಎ–ಗು೦/ಚ.ಮೀ	ಮೇರೆಗಳು
ಸೆಟ್ಲಮೆಂಟ್ ಶಾಂತಿನಿಕೇತನ, ಹುಬ್ಬಳ್ಳಿ	ಸರಕಾರ	ಬಮ್ಮಾಪುರ (ಎ೦)	198	4ಎ-10ಗು	ಪೂರ್ವ : ರಸ್ತೆ ಪಶ್ಚಿಮ : ರಿ.ಸ.ನಂ 200 ಉತ್ತರ : ರಿ.ಸ.ನಂ 199 ದಕ್ಷಿಣ : ರಿ.ಸ.ನಂ 197
			199	2ಎ-18ಗು	ಪೂರ್ವ : ರಿ.ಸ.ನಂ 198 ರ ಭಾಗ ಮತ್ತು ರಸ್ತೆ ಪಶ್ಚಿಮ : ರಿ.ಸ.ನಂ 200 ಉತ್ತರ : ರಿ.ಸ.ನಂ 201 ರ ಭಾಗ ಮತ್ತು ರಸ್ತೆ ದಕ್ಷಿಣ : ರಿ.ಸ.ನಂ 198
ಒಟ್ಟೂ				6ಎ-28ಗು	

ಈ ಅನುಸೂಚಿಯಲ್ಲಿ ಒಳಗೊಂಡಿರುವ ಪ್ರದೇಶವು ಕೊಳಚೆ ಪ್ರದೇಶವೆಂದು ಘೋಷಿಸಲು ಇದರಲ್ಲಿ ಹಿತಾಸಕ್ತಿ ಉಳ್ಳವರು ಅಥವಾ ಆಕ್ಷೇಪವುಳ್ಳವರು ತಮ್ಮ ಹಿತಾಸಕ್ತಿ/ಆಕ್ಷೇಪಣೆ ಬಗ್ಗೆ ಈ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ಪ್ರಕಟವಾದ 30 (ಮೂವತ್ತು) ದಿನಗಳ ಒಳಗಾಗಿ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಟೋಲನಾಕಾ ಧಾರವಾಡ ಇವರಿಗೆ ತಲುಪುವಂತೆ ತಮ್ಮ ಬೇಡಿಕೆ ಆಕ್ಷೇಪಣೆಗಳನ್ನು ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಜಿಲ್ಲಾಧಿಕಾರಿಗಳು, ಧಾರವಾಡ

PR – 588

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಗದಗ -582101

ದೂರವಾಣಿ ಸಂ.08372-237300 ಇಮೇಲ್: deo gadag@gmail.com

ಸಂ.ಹಿಭೂಇ/ಗಭೂಇ/ಗದಗ/ಸೋ್ಫೀನ್ ಕ್ರಷರ್/2025-26 ದಿನಾಂಕ:09-09-2025.

ಅಧಿಸೂಚನೆ

ವಿಷಯ:- ಗದಗ ಜಿಲ್ಲೆಯ ಕಲ್ಲು ಪುಡಿ ಮಾಡುವ ಘಟಕಗಳ ಸ್ಥಾಪನೆ ಪ್ರದೇಶವನ್ನು ಸುರಕ್ಷಿತ (ಸೇಫರ್ ಝೋನ್) ವಲಯವೆಂದು ಘೋಷಣೆಗೊಳಿಸುವ ಬಗ್ಗೆ.

ಉಲ್ಲೇಖ:-1) ಕರ್ನಾಟಕ ಕಲ್ಲು ಪುಡಿ ಮಾಡುವ ಘಟಕಗಳ ನಿಯಂತ್ರಣ (ತಿದ್ದುಪಡಿ) ಅಧಿನಿಯಮ 2013 & ನಿಯಮಾವಳಿ 2014.

2) ಕ್ರಷರ್ ಘಟಕಗಳ ಲೈಸೆನ್ಸ್ ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರ ಸಭೆಯ ದಿನಾಂಕ:29-08-2025.

*****

ಗದಗ ಜಿಲ್ಲೆ, ಲಕ್ಷ್ಮೇಶ್ವರ, ತಾಲೂಕು ವ್ಯಾಪ್ತಿಯ ಪಟ್ಟಾ ಜಮೀನಿನಲ್ಲಿ ಹೊಸದಾಗಿ ಕಲ್ಲು ಪುಡಿ ಮಾಡುವ ಘಟಕಗಳ ಸ್ಥಾಪನೆಗೆ ಕೋರಿದ ಪ್ರದೇಶವನ್ನು ಸುರಕ್ಷಿತ (ಸೇಫರ್ ಝೋನ್) ವಲಯವೆಂದು ಘೋಷಿಸಲು ಸ್ವೀಕೃತವಾದ ಅರ್ಜಿಗಳ ಪ್ರದೇಶವನ್ನು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ(ಕ್ರಷರ್) ನಿಯಂತ್ರಣ (ತಿದ್ದುಪಡಿ) ಅಧಿನಿಯಮ 2013 ಕಲಂ 6(1)ರ ಷರತ್ತುಗಳಂತೆ ಗಣಿ ಮತ್ತು ಭೂವಿಜ್ಞಾನ, ಕಂದಾಯ, ಅರಣ್ಯ ಇಲಾಖೆಗಳು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಗದಗ ಇವರು ಜಂಟಿ ತಪಾಸಣೆ ಕೈಗೊಂಡು ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರದೇಶಗಳ ವಿವರ ಈ ಕೆಳಗಿನಂತಿವೆ.

ಲಕ್ಷ್ಮೇಶ್ವರ ತಾಲೂಕು

ಕ್ರ ಸಂ	ಗ್ರಾಮ	ಸರ್ವೆ ಸಂಖ್ಯೆ	ವಿಸ್ತೀರ್ಣ (ಎಕರೆಗಳಲ್ಲಿ)
1	ಸೋಗಿವಾಳ	101/5	1-00

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಸದರಿ ಜಂಟಿ ತಪಾಸಣೆ ವರದಿಯ ಶಿಫಾರಸ್ಸಿನಂತೆ ಕ್ರಷರ್ ಸುರಕ್ಷತಾ ವಲಯದ ಮಾನದಂಡಗಳು ಪಾಲನೆಯಾಗುತ್ತಿರುವ ಪ್ರಯುಕ್ತ ದಿನಾಂಕ:29-08-2025 ರಂದು ಜರುಗಿದ ಕ್ರಷರ್ ಘಟಕಗಳ ಲೈಸೆನ್ಸ್ ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರ ಸಮಿತಿ ಸಭೆಯ ಚರ್ಚಿಸಿ ಅನುಮೋದಿಸಲಾಗಿರುವ ಈ ಮೇಲಿನ ಅರ್ಹ ಅರ್ಜಿತ ಪ್ರದೇಶದ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ(ಕ್ರಷರ್) ನಿಯಂತ್ರಣ(ತಿದ್ದುಪಡಿ) ಅಧಿನಿಯಮ 2013ರ ಉಪ ಪ್ರಕರಣದ ಕಲಂ 3 ರಂತೆ ಕಲ್ಲು ಪುಡಿ ಮಾಡುವ ಘಟಕ ಸ್ಥಾಪನೆ ಪ್ರದೇಶವನ್ನು ಸುರಕ್ಷಿತ (ಸೇಫರ್ ಝೋನ್) ವಲಯವೆಂದು ಘೋಷಣೆ ಮಾಡಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಬೇಕಾಗಿರುವ ಹಿನ್ನಲೆಯಲ್ಲಿ ಉದ್ದೇಶಿತ ಸುರಕ್ಷಿತ ವಲಯದ ವಿವರವನ್ನು ಸಾರ್ವಜನಿಕರ ಗಮನಕ್ಕೆ ತರಲು ಈ ಅಧಿಸೂಚನೆ ಹೊರಡಿಸಲಾಗಿದೆ.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು
ನಿಯಂತ್ರಣ ಪ್ರಾಧಿಕಾರ, ಗದಗ.

PR – 589

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಧಾರವಾಡ.

SOMASHEKAR B E